ಮಾಧ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ

# ಮಾನಸ ಗಂಗೋತ್ರಿ

ಇದು ಜ್ಞಾನದ ಬೆಳಕು



ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಮೈಸೂರು

ಸಂಪುಟ 49 ಸಂಚಿಕೆ 2 ಪುಟ 4 ಅಕ್ಟೋಬರ್ 29

# 19ಕ್ಕೆ ಮೈಸೂರು ವಿವಿ ಶತಮಾನದ ಘಟಿಕೋತ್ಸವ

**ಮಾನಸಗಂಗೋತ್ರಿ ವಾರ್ತೆ:** ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದ ಶತಮಾನದ ಘಟಿಕೋತ್ಸವವು ಅಕ್ಟೋಬರ್ 19ರಂದು ನಡೆಯಲಿದ್ದು ಪ್ರಧಾನಿ ನರೇಂದ್ರ ಮೋದಿ ಘಟಿಕೋತ್ಸವ ಭಾಷಣ ಮಾಡುವರು ಇನ್ಫೋಸಿಸ್ ಫೌಂಡೇಶನ್ ಡಾ ಸುಧಾ ಮೂರ್ತಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು.

ಅಂದು ಬೆಳಿಗ್ಗೆ 10 ಗಂಟೆಗೆ ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಧಾನಿ ಘಟಿಕೋತ್ಸವ ಭಾಷಣ ಮಾಡಲಿದ್ದು ಕುಲಾಧಿಪತಿ ಹಾಗೂ ರಾಜ್ಯಪಾಲ ವಾಜುಬಾಯಿ ವಾಲಾ ಅಧ್ಯಕ್ಷತೆ ವಹಿಸುವರು. ಉನ್ನತ ಶಿಕ್ಷಣ ಸಚಿವ ಸಿ. ಎನ್. ಅಶ್ವಥ್ ನಾರಾಯಣ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು ಎಂದು ಕುಲಪತಿ ಪ್ರೊಫೆಸರ್ ಜಿ ಹೇಮಂತ್ ಕುಮಾರ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ವಿವಿಗೆ ಇದು ಶತಮಾನದ ಘಟಿಕೋತ್ಸವ ವಾದ ಹಿನ್ನಲೆಯಲ್ಲಿ ಪ್ರಧಾನಿ ಅವರು ವರ್ಚುಲ್ ಲೈವ್ ಮೂಲಕ 25 ನಿಮಿಷ ಭಾಷಣ ಮಾಡುವರು. ಕರೋನ ಹಿನ್ನೆಲೆಯಲ್ಲಿ ಕಾರ್ಯಕ್ರಮಕ್ಕೆ ನೂರು ಜನರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಸಿಂಡಿಕೇಟ್ ಮತ್ತು ಶಿಕ್ಷಣ ಮಂಡಳಿಯ ಸದಸ್ಯರು ಭಾಗವಹಿಸುವರು ಎಂದರು.

29018 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ 654 ಮಂದಿಗೆ ಪಿಎಚ್ ಡಿ: ಈ ಬಾರಿ 29018ವಿದ್ಯಾರ್ಥಿಗಳಿಗೆ ವಿವಿಧ ಪದವಿ 654 ಅಭ್ಯರ್ಥಿಗಳಿಗೆ ಪಿ ಎಚ್ ಡಿ 7971 ಮಂದಿಗೆ ಸ್ನಾತಕೋತ್ತರ ಪದವಿ 20393 ಮಂದಿಗೆ ಸ್ನಾತಕ ಪದವಿ ಪ್ರದಾನ ಮಾಡಲಾಗುವುದು ಒಟ್ಟು 392 ಪದಕಗಳು ಮತ್ತು 198 ಬಹುಮಾನವನ್ನು 230 ಅಭ್ಯರ್ಥಿಗಳು ಪಡೆದುಕೊಂಡಿದ್ದಾರೆ.


ಘಟಿಕೋತ್ಸವ ಕಾರ್ಯಕ್ರಮದ ರೂಪರೇಷೆ: ಕೊರೋನ ಹಿನ್ನೆಲೆಯಲ್ಲಿ ಅತಿ ಹೆಚ್ಚು ಚಿನ್ನದ ಪದಕ ಪಡೆದ 30 ಮಂದಿಗೆ ಮಾತ್ರ ಬೆಳಗ್ಗೆ ಕಾರ್ಯಕ್ರಮಕ್ಕೆ ಅವಕಾಶ ನೀಡಲಾಗುವುದು 2:30 ಕ್ಕೇ ಆಂಧ್ರಪ್ರದೇಶದ ಕೇಂದ್ರ ವಿವಿ ಕುಲಪತಿ ಪ್ರೊ ಎಸ್ ಎ ಕೋರಿ ಅತಿಥಿಗಳಾಗಿ ಭಾಗವಹಿಸಲಿದ್ದು ಹೇಳಲ್ಲ ವಿಭಾಗದ ವಿದ್ಯಾರ್ಥಿಗಳಿಗೆ 25 ಮಂದಿಯಂತೆ ಅವಕಾಶ ನೀಡಲಾಗುವುದು. 100 ಘಟಿಕೋತ್ಸವದ ಹಿನ್ನೆಲೆಯಲ್ಲಿ 12 ತಿಂಗಳು ವಿಶೇಷ ಉಪನ್ಯಾಸ ಏರ್ಪಡಿಸುವ ಆಲೋಚನೆ ಇತ್ತು ಆದರೆ ಇದು ಸಾಧ್ಯವಾಗಿಲ್ಲ ಜನವರಿಯಿಂದ ವಿಶೇಷ ಉಪನ್ಯಾಸ ಆರಂಭಿಸಲು ಪ್ರಯತ್ನಿಸುವುದಾಗಿ ತಿಳಿಸಿದರು.

ವಾಣಿಜ್ಯ ನಿಕಾಯದಲ್ಲಿ 87 ಮಂದಿ ಪಿ ಎಚ್ ಡಿ ಪದವಿಗೆ ಅರ್ಹರಾಗಿದ್ದು 59 ಮಂದಿ ಒಟ್ಟು ಪದಕ ಬಹುಮಾನ ಮಂದಿ ಸ್ನಾತಕೋತ್ತರ ಪದವಿಗೆ ಹಾಗೂ 10 592 ಮಂದಿ ಸ್ನಾತಕ ಪದವಿಗೆ ಅರ್ಹರಾಗಿದ್ದಾರೆ ಶಿಕ್ಷಣ ನಿಕಾಯದಲ್ಲಿ 29 ಮಂದಿ ಪಿ ಎಚ್ ಡಿ ಪದವಿಗೆ ಅರ್ಹರಾಗಿದ್ದು 32 ಮಂದಿ ಒಟ್ಟು ಪದಕ ಬಹುಮಾನ ವಿಜೇತರಾಗಿದ್ದಾರೆ.




ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕುಲಪತಿ ಪ್ರೊ.ಜಿ. ಹೇಮಂತ ಕುಮಾರ್ ಮಾತನಾಡಿದರು. ಕುಲಸಚಿವರಾದ ಪ್ರೊ.ಆರ್. ಶಿವಪ್ಪ, ಪ್ರೊ.ಕೆ.ಎಂ. ಮಹದೇವನ್ ಇದ್ದಾರೆ.

## ಮೈಸೂರು ವಿಶ್ವವಿದ್ಯಾನಿಲಯದಿಂದ ಮೂರು ಗ್ರಂಥಗಳ ಬಿಡುಗಡೆ



**ಮಾನಸಗಂಗೋತ್ರಿ ವಾರ್ತೆ:** ಮೈಸೂರು ವಿಶ್ವವಿದ್ಯಾನಿಲಯ ಪ್ರಾಚ್ಯ ವಿದ್ಯಾ ಸಂಶೋಧನಾಲಯ ಹೊರತಂದಿರುವ ಡಾಕ್ಟರ್ ಎಸ್ ಜಗನ್ನಾಥ್ ಅವರು ಮನಶಾಸ್ತ್ರವಿವರಣಂ ಡಾಕ್ಟರ್ ವೈ ಸಿ ಜಾನುಮತಿ ಅವರ ಖಡ್ಗ ಶಾಸ್ತ್ರ ಹಾಗೂ ಸಿ ಗೌರಿ ಅವರ ಮತ್ರ್ಯ ಕೃಷ್ಣರಾಜ ಗುಣಲೋಕ ಎಂಬ ಗ್ರಂಥಗಳನ್ನು ಕುಲಪತಿ ಪ್ರೊ ಜಿ ಹೇಮಂತ್ ಕುಮಾರ್ ಬಿಡುಗಡೆಗೊಳಿಸಿದರು ಪ್ರಾಚ್ಯ ವಿದ್ಯಾ ಸಂಶೋದನಾಲಯವು ವಿಶ್ವವಿದ್ಯಾನಿಲಯ ಪ್ರಕಟಣ ವಿಭಾಗ ಪ್ರಸಾರ ರಂಗದೊಂದಿಗೆ ಈ ಮೂರು ಕೃತಿಗಳನ್ನು ಹೊರತಂದಿದೆ. ಕ್ರಾಫರ್ಡ್ ಹಾಲ್ ನಲ್ಲಿ ಮಂಗಳವಾರ ನಡೆದ ಸರಳ ಸಮಾರಂಭದಲ್ಲಿ ಮೂರು ಪುಸ್ತಕಗಳನ್ನು ಲೋಕಾರ್ಪಣೆ ಮಾಡಲಾಯಿತು ಕುಲಸಚಿವ ಪ್ರೊ ಆರ್ ಶಿವಪ್ಪ ಪ್ರಾಚ್ಯ ವಿದ್ಯಾ ಸಂಶೋಧನೆಯ ನಿರ್ದೇಶಕ ಡಾಕ್ಟರ ಶಿವರಾಜಪ್ಪ ಮೊದಲಾದವರು ಇದ್ದರು

## ದೈಹಿಕ ಶಿಕ್ಷಣ ಪಠ್ಯ ಬೋಧನಾ ವಿಧಾನ ಕಾರ್ಯಾಗಾರ 28 ರಿಂದ

**ಮಾನಸಗಂಗೋತ್ರಿ ವಾರ್ತೆ:** ದೈಹಿಕ ಶಿಕ್ಷಣ ಪಠ್ಯ ಬೋಧನಾ ವಿಧಾನ ಕಾರ್ಯಾಗಾರ 28 ರಿಂದ ಮೈಸೂರು : ಮೈಸೂರು ವಿವಿಯ ದೈಹಿಕ ಶಿಕ್ಷ ವಿಭಾಗ ಹಾಗೂ ಮೈಸೂರು ವಿವಿ ಸಂಯೋಜಿತ ಕಾಲೇಜುಗಳ ದೈಹಿಕ ಶಿಕ್ಷಣ ನಿರ್ದೇಶಕರ ಸಂಘದ ಸಂಯುಕ್ತಾಶ್ರಯದಲ್ಲಿ ಅ . 28 ಮತ್ತು 29 ರಂದು ಎರಡು ದಿನಗಳ ಕಾಲ ದೈಹಿಕ ಶಿಕ್ಷಣ ಪಠ್ಯ ಬೋಧನಾ ವಿಧಾನ ವಿಷಯ ಬಗ್ಗೆ ಎರಡು ದಿನದ ಕಾರ್ಯಾಗಾರ ದೈಹಿಕ ಶಿಕ್ಷಣ ವಿಭಾಗದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಏರ್ಪಡಿಸಿದೆ . ಮೈಸೂರು ವಿವಿಯ ಕಳೆದ 100 ವರ್ಷಗಳಿಂದ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಹೆಚ್ಚು ಒತ್ತನ್ನು ನೀಡುತ್ತಾ ಬಂದಿದೆ . ವಿದ್ಯಾರ್ಥಿಗಳ ವ್ಯಕ್ತಿತ್ವದ ಬೆಳವಣಿಗೆ ಹಾಗೂ ಆರೋಗ್ಯ ವೃದ್ಧಿಗೆ ಕ್ರೀಡಾ ಚಟುವಟಿಕೆಗಳು ಸಹಕಾರಿಯಾಗಿದೆ . ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೂಲಕ ವಿದ್ಯಾರ್ಥಿ ಗಳ ದೈಹಿಕ , ಮಾನಸಿಕ , ಭಾವನಾತ್ಮಕ ಹಾಗೂ ಆರೋಗ್ಯ ಬೆಳವಣಿಗೆಗಳು ವೃದ್ಧಿಯಾಗುತ್ತದೆ .



ದೈಹಿಕ ಶಿಕ್ಷಣ ವಿಭಾಗದ ದೃಷ್ಟಿಕೋನವು ವಿದ್ಯಾರ್ಥಿಗಳ ಉತ್ತಮ ಆರೋಗ್ಯ , ಸಮಾಜದಲ್ಲಿ ಉತ್ತಮ ಜೀವನ ವನ್ನು ನಡೆಸಲು ಅಗತ್ಯವಿರುವ ದೈಹಿಕ ಸಾಮಾರ್ಥ ಹಾಗೂ ಕ್ರೀಡಾ ಕೌಶಲ್ಯ ವರ್ಧನೆ ಮುಖ್ಯವಾಗಿದೆ . ಮೈಸೂರಿನ ಜಿಲ್ಲಾಡಳಿತ , ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಲಾಮಂದಿರದ ಮನೆಯಂಗಳದಲ್ಲಿ 28 ರ ಬೆಳಗ್ಗೆ 10 ಕ್ಕೆ ಮೈಸೂರು ವಿವಿಯ ಕುಲಪತಿ ಪ್ರೊ.ಜಿ. ಹೇಮಂತ್‌ಕುಮಾರ್ ಹಾಗೂ ಶಾಸಕ ಎಲ್ . ಆಯೋಜಿಸಿದ್ದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯಲ್ಲಿ ಅವರ ಭಾವಚಿತ್ರಕ್ಕೆ ಹೆಚ್ಚುವರಿ ಜಿಲ್ಲಾಧಿಕಾರಿ ನಾಗೇಂದ್ರ ವಿವಿಯ ದೈಹಿಕ ಶಿಕ್ಷಣ ವಿಭಾಗದ ವಿಶ್ರಾಂತ ನಿರ್ದೇಶಕ ಡಾ.ಸಿ. ಕೃಷ್ಣ ಕಾರ್ಯಾಗಾರ ಡಾ.ಬಿ.ಎಸ್ . ಮಂಜುನಾಥ‌ಸ್ವಾಮಿ ಪುಷ್ಪಾರ್ಚನೆ ಮಾಡಿದರು . ಸಹಾಯಕ ನಿರ್ದೇಶಕ ಹನೂರು ಚನ್ನಪ್ಪ , ಉದ್ಘಾಟಿಸುವರು . ಅ . 29 ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಕುಲಸಚಿವ ( ಪರೀಕ್ಷಾಂಗ ) ಕನ್ನಡ ಚಳವಳಿಗಾರ ತಾಯೂರು ವಿಠಲಮೂರ್ತಿ ಇದ್ದಾರೆ . ಪ್ರೊ.ಕೆ.ಎಂ. ಮಹದೇವನ್ ಹಾಗೂ ನಿವೃತ್ತ ಪ್ರಾಧ್ಯಾಪಕ ಪ್ರೊ. ಚಂದ್ರಕುಮಾರ್ ಭಾಗವಹಿಸುವರು .

# ಮಾನಸ ಗಂಗೋತ್ರಿ

ಇದು ಜ್ಞಾನದ ಬೆಳಕು


# ಸಂಪಾದಕೀಯ 2

## ವಿವೇಕವಾಣಿ

**ದಿನಕ್ಕೊಮ್ಮೆಯಾದರೂ ನಿಮ್ಮ ಜೊತೆ ನೀವು ಮಾತನಾಡಿಕೊಳ್ಳಿ, ಇಲ್ಲವಾದರೆ ಜಗತ್ತಿನ ಅತ್ಯುತ್ತಮ ವ್ಯಕ್ತಿಯೊಂದಿಗಿನ ಸಂಭಾಷಣೆ ಕಳೆದುಕೊಳ್ಳುತ್ತೀರಿ...**

– ಸ್ವಾಮಿ ವಿವೇಕಾನಂದ.

## ಸಂಪಾದಕೀಯ

### ಕೋವಿಡ್ ಪ್ರಕರಣ: ಸಂಖ್ಯೆ ಇಳಿಕೆ ಮೈಮರೆಯಲು ಕಾರಣವಾಗದಿರಲಿ

ರಾಜ್ಯದಲ್ಲಿ ಮಾತ್ರವಲ್ಲ, ದೇಶದಾದ್ಯಂತ ಕೋವಿಡ್ ಪ್ರಕರಣಗಳು ಹಾಗೂ ಈ ಸಂಬಂಧದ ಸಾವಿನ ಪ್ರಮಾಣ ಇತ್ತೀಚಿನ ದಿನಗಳಲ್ಲಿ ಗಣನೀಯವಾಗಿ ಇಳಿಕೆಯಾಗಿದೆ. ಕೊರೊನಾ ವೈರಸ್ ಕಾರಣದಿಂದ ಏಳೆಂಟು ತಿಂಗಳುಗಳಿಂದ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಜನಸಮುದಾಯ ಎದುರಿಸುತ್ತಿರುವ ಆರ್ಥಿಕ, ಸಾಮಾಜಿಕ ಹಾಗೂ ಕೌಟುಂಬಿಕ ಸಂಕಷ್ಟ, ಜನಮನದಲ್ಲಿ ದಟ್ಟೈಸಿರುವ ತೀವ್ರ ಆತಂಕದ ಕಾರ್ಮೋಡದ ನಡುವೆ, ಇಂತಹದ್ದೊಂದು ಆಶಾದಾಯಕ ಸುದ್ದಿ ಮೂಡಿಸುವ ಭರವಸೆಯು ಬೆಲೆಕಟ್ಟಲಾಗದಂತಹದ್ದು. ರಾಜ್ಯದಲ್ಲಿ ಈ ತಿಂಗಳ ಪ್ರಾರಂಭದಲ್ಲಿ ದಿನವೂ ೧೦ ಸಾವಿರ ದಾಟುತ್ತಿದ್ದ ಪ್ರಕರಣಗಳ ಸಂಖ್ಯೆ ಈಗ ೩,೧೦೦೦ರ ಆಸುಪಾಸಿಗೆ ತಗ್ಗಿರುವುದು, ಕೋವಿಡ್ ಲಸಿಕೆಯ ಅಭಿವೃದ್ಧಿಯಲ್ಲಿ ಪ್ರಗತಿ ಕಂಡುಬರುತ್ತಿರುವುದು ಜನರಲ್ಲಿ ತುಸು ನಿರಾಳಭಾವ ಮೂಡಿಸಿದೆ. ಆದರೆ, ಈ ವಿಷಯದಲ್ಲಿ ನಮ್ಮದು ಇನ್ನೂ ಪ್ರಪಾತದಂಚಿನ ಹಗ್ಗದ ಮೇಲಿನ ನಡಿಗೆಯೇ ಎಂಬ ಕಟು ವಾಸ್ತವವೂ ನಮ್ಮ ಮುಂದೆ ಇದೆ. ಈ ಕಾರಣಕ್ಕೇ ಕೊರೊನಾ ಸೋಂಕಿನ ವಿರುದ್ಧದ ಸಮರದಲ್ಲಿ ಮುಂದಿನ ಎರಡು ತಿಂಗಳು ನಿರ್ಣಾಯಕ ಘಟ್ಟ ಎಂದು ಹೇಳಿರುವ ತಜ್ಞರ ಮಾತು ಮೌಲಿಕವಾದುದು. ಮಾರುಕಟ್ಟೆಗಳಲ್ಲಿ, ಅಂಗಡಿ ಮುಂಗಟ್ಟುಗಳಲ್ಲಿ ವ್ಯಾಪಾರ ವಹಿವಾಟು ಚೇತರಿಕೆ ಕಂಡಿದೆ. ಅನ್‌ಲಾಕ್ ಭಾಗವಾಗಿ ಚಿತ್ರಮಂದಿರಗಳು, ಮಲ್ಟಿಪ್ಲೆಕ್ಸ್ ಆರಂಭವಾಗಿವೆ. ಶೇ ೫೦ರಷ್ಟು ಸೀಟು ಭರ್ತಿಗೆ ಮಾತ್ರ ಅವಕಾಶ ನೀಡಿ ಚಿತ್ರಮಂದಿರಗಳ ಬಾಗಿಲು ತೆರೆಯಲಾಗಿದೆ. ಆದರೆ ಪ್ರೇಕ್ಷಕರ ಸ್ಪಂದನ, ನಿರೀಕ್ಷೆಯಂತೆ ಇಲ್ಲ ಎಂಬ ವರದಿಗಳಿವೆ. ಸಾಮೂಹಿಕವಾಗಿ ಜನ ಸೇರುವ ಸ್ಥಳಗಳಿಗೆ ಬರಲು ನಾಗರಿಕರು ಇನ್ನೂ ಹಿಂದೇಟು ಹಾಕುತ್ತಿದ್ದಾರೆ. ಇದನ್ನು ಮುನ್ನೆಚ್ಚ–ರಿಕೆಯ ಭಾಗವೆಂದೂ ಪರಿಗಣಿಸ ಬಹುದು. ಆದರೆ ಹಾಗೆಂದ ಮಾತ್ರಕ್ಕೆ ಎಲ್ಲರಲ್ಲೂ ಇಂತಹದ್ದೊಂದು ವಿವೇಕ ಮೂಡಿದೆ ಎನ್ನಲಾಗದು. ಇದಕ್ಕೆ ರಸ್ತೆಗಳಲ್ಲಿ, ವ್ಯಾಪಾರ ಸ್ಥಳಗಳಲ್ಲಿ ಸೂಕ್ತವಾಗಿ ಮಾಸ್ಕ್ ಧರಿಸದೆ, ಅಂತರ ಕಾಯ್ದುಕೊಳ್ಳದೆ ಸಂಚರಿಸುವ ಜನರೇ ಸಾಕ್ಷಿ. ಉಪಚುನಾವಣೆ ನಡೆಯುತ್ತಿರುವ ಶಿರಾ ಮತ್ತು ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರಗಳ ಪ್ರಚಾರದ ಸಂದರ್ಭದಲ್ಲಂತೂ ಎಗ್ಗಿಲ್ಲದೇ ಗುಂಪುಗುಂಪಾಗಿ ಜನ ಸೇರುತ್ತಿರುವ ದೃಶ್ಯಗಳು ಸಾಮಾನ್ಯ ಎಂಬಂತಾಗಿವೆ. ಹೇಳಿಕೇಳಿ ಕೊರೊನಾ ಸೋಂಕು ಸಾಂಕ್ರಾಮಿಕ. ಹೀಗಾಗಿ, ಯಾರೋ ಕೆಲವರು ಎಚ್ಚರಿಕೆ ವಹಿಸಿದ ಮಾತ್ರಕ್ಕೆ ಸೋಂಕು ಸಂಪೂರ್ಣ ನಿಯಂತ್ರಣ–ಕ್ಕೆ ಬರದು. ಈ ಸಾಮೂಹಿಕ ಪಿಡುಗನ್ನು ಎದುರಿಸುವ ವಿಧಾನವೂ ಸಾಮೂಹಿಕವಾಗಿಯೇ ಇರಬೇಕಾಗುತ್ತದೆ. ಎಚ್ಚರಿಕೆ ಸರಪಳಿಯ ಒಂದು ಕೊಂಡಿ ಸಡಿಲವಾದರೂ ಹತ್ತಾರು ಜನರಿಗೆ, ಆ ಮೂಲಕ ನೂರಾರು ಮಂದಿಗೆ ಅದರ ಬಿಸಿ ತಟ್ಟುತ್ತದೆ ಎಂಬುದು ಈಗಾಗಲೇ ನಮ್ಮೆಲ್ಲರ ಅರಿವಿಗೆ ಬಂದಿದೆ.

**ದಿವಾಕರ್**

### :ಕಾಲೇಜುಗಳ ಪುನರಾರಂಭ ತೀರ್ಮಾನ: ಶಿಕ್ಷಣ ವ್ಯವಸ್ಥೆಯ ಚೇತರಿಕೆಗೆ ಪೂರಕ

ನವೆಂಬರ್ 17ರಿಂದ ಕಾಲೇಜುಗಳನ್ನು ಪುನರಾರಂಭಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಕೊರೊನಾ ಸೋಂಕಿನ ನಿಯಂತ್ರಣದ ಉದ್ದೇಶದಿಂದಾಗಿ ಕೈಗೊಂಡಿದ್ದ ಕ್ರಮಗಳಿಂದ ವ್ಯತ್ಯಯಗೊಂಡಿರುವ ಶೈಕ್ಷಣಿಕ ಚಟುವಟಿಕೆಗಳನ್ನು ಮರಳಿ ಹಳಿಗೆ ತರುವ ಪ್ರಯತ್ನದಲ್ಲಿ ಇದು ಪ್ರಮುಖ ಹೆಜ್ಜೆಯಾಗಿದೆ. ಕೇಂದ್ರ ಸರ್ಕಾರದ ಅನ್‌ಲಾಕ್ ಮಾರ್ಗಸೂಚಿ ಮತ್ತು ಯುಜಿಸಿ ನಿರ್ದೇಶನದ ಮೇರೆಗೆ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ, ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳು ಪುನರಾರಂಭವಾಗಲಿವೆ. ಕಾಲೇಜು ತೆರೆಯುವ ನಿರ್ಣಯ ಕೈಗೊಂಡಿದ್ದರೂ ತರಗತಿಗಳಿಗೆ ಹಾಜರಾಗುವ ಇಲ್ಲವೇ ಹಾಜರಾಗದಿರುವ ನಿರ್ಧಾರವನ್ನು ವಿದ್ಯಾರ್ಥಿಗಳ ವಿವೇಚನೆಗೆ ಬಿಟ್ಟಿರುವುದು ಸ್ವಾಗತಾರ್ಹ. ತರಗತಿಗೆ ಹಾಜರಾಗಲು ಬಯಸುವ ವಿದ್ಯಾರ್ಥಿಗಳು ಪೋಷಕರಿಂದ ಒಪ್ಪಿಗೆ ಪತ್ರ ತರಬೇಕಾಗಿದೆ. ಹಾಜರಾತಿಯನ್ನು ಕಡ್ಡಾಯಗೊಳಿಸದಿರುವ ಸರ್ಕಾರ, ತರಗತಿಗೆ ಖುದ್ದಾಗಿ ಹಾಜರಾಗದಿರುವ ವಿದ್ಯಾರ್ಥಿಗಳಿಗೆ ಆನ್‌ಲೈನ್ ಆಯ್ಕೆಯನ್ನೂ ಮುಕ್ತವಾಗಿಟ್ಟಿದೆ. ಆಫ್‌ಲೈನ್ ಮತ್ತು ಆನ್‌ಲೈನ್ ಎರಡನ್ನೂ ಆಯ್ದುಕೊಳ್ಳುವ ಅವಕಾಶವೂನ ವಿದ್ಯಾರ್ಥಿಗಳಿಗಿದೆ. ವಿದ್ಯಾರ್ಥಿಗಳ ಸುರಕ್ಷತೆಗಾಗಿ ಎಲ್ಲ ರೀತಿಯ ಮುನ್ನೆಚ್ಚ–ರಿಕೆ ವಹಿಸಲಾಗುವುದು ಎಂದು ಹೇಳಿರುವ ಸರ್ಕಾರ, ಯಾವುದೇ ವಿದ್ಯಾರ್ಥಿಯ ಆರೋಗ್ಯದಲ್ಲಿ ವ್ಯತ್ಯಯವುಂಟಾ ದರೆ ಸರ್ಕಾರದ ವತಿಯಿಂದಲೇ ಚಿಕಿತ್ಸೆ ನೀಡಲಾಗುವುದು ಹಾಗೂ ವಿದ್ಯಾರ್ಥಿಗಳ ಸುರಕ್ಷತೆಗೆ ಸಂಬಂಧಿಸಿದಂತೆ ಪ್ರತೀ ಕಾಲೇಜಿನಲ್ಲೂ ಕಾ ಂ ರ್ ್ ಪ ಡೆ ಂ ೊ ಂ ದ ನ್ನು ರೂಪಿಸಲಾಗುವುದು ಎಂದು ಹೇಳಿದೆ. ವಿದ್ಯಾರ್ಥಿಗಳ ಕಲಿಕೆ ಹಾಗೂ ಶಿಕ್ಷಕರ ಬೋಧನೆಯ ಗುಣಮಟ್ಟ ಹೆಚ್ಚಿಸುವ ಉದ್ದೇಶದಿಂದ ‘ಕಲಿಕಾ ನಿರ್ವಹಣೆ ಆನ್‌ಲೈನ್ ಪೋರ್ಟಲ್’ ಆರಂಭಿಸುವ ಸರ್ಕಾರದ ಉದ್ದೇಶವೂ ಸರಿಯಾಗಿದೆ. ಸುಮಾರು 5 ಲಕ್ಷ ವಿದ್ಯಾರ್ಥಿಗಳು ಈ ಪೋರ್ಟಲ್‌ನ ಪ್ರಯೋಜನ ಪಡೆಯಲಿದ್ದಾರೆ ಎನ್ನಲಾಗಿದೆ. ಮುನ್ನೆಚ್ಚರಿಕೆ ಕ್ರಮಗಳ ನಡುವೆಯೂ ಕಾಲೇಜುಗಳ ಪುನರಾರಂಭವು ಸರ್ಕಾರದ ಪಾಲಿಗೆ ಕಠಿಣವಾದ ಸವಾಲು ಎನ್ನುವುದರಲ್ಲಿ ಅನುಮಾನವಿಲ್ಲ. ಬೋಧಕವರ್ಗ ಮತ್ತು ವಿದ್ಯಾರ್ಥಿಗಳ ಆರೋಗ್ಯದ ರಕ್ಷಣೆಗೆ ವ್ಯವಸ್ಥೆ ಮಾಡುವುದು ಸುಲಭವಲ್ಲ. ಕಾಲೇಜುಗಳ ಜೊತೆಗೆ ಸರ್ಕಾರದ ಅಧೀನದಲ್ಲಿರುವ ಹಾಸ್ಟೆಲ್‌ಗಳನ್ನೂ ಪುನರಾರಂಭಿಸುವುದು ಅನಿವಾರ್ಯ. ಹಾಸ್ಟೆಲ್‌ಗಳಲ್ಲಿ ಅಂತರ ಕಾಪಾಡಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಿದೆ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ.




## ಓದುಗರ ಪತ್ರ

### ಕುಡಿಯುವ ನೀರಿನ ವ್ಯವಸ್ಥೆ ಇರಲಿ

ಹಚ್ಚ ಹಸಿರಿನಿಂದ ಕೂಡಿದ್ದು ಎಲ್ಲರ ಗಮನ ಸೆಳೆದಿದೆ. ಬಣ್ಣಬಣ್ಣದ ಹೂವುಗಳು ಇಲ್ಲಿ ಮುಖ್ಯ ಆಕರ್ಷಣೆಯಾಗಿದ್ದು, ವಿವಿಧ ಬಗ್ಗೆ ಮರಗಳನ್ನು ನಾವು ಇಲ್ಲಿ ನೋಡಬಹುದು. ಮನುಷ್ಯನಿಗೆ ಮೂಲಭೂತ ಹಕ್ಕು ಅಲ್ಲದೆ ಗಾಳಿ ಜೊತೆಗೆ ನೀರು ಸಹ ಮುಖ್ಯ. ಆದರೆ ಇಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹದಗೆಟ್ಟಿದೆ. ಕುಡಿಯುವ ನೀರಿಗಾಗಿ ಅಲ್ಲಲ್ಲಿ ನೀರಿನ ಘಟ್ಟವನ್ನು ನಿರ್ಮಿಸಿದ್ದಾರೆ. ಆದರೆ ಅದು ಎಷ್ಟರಮಟ್ಟಿಗೆ ಉಪಯೋಗವಾಗುತ್ತದೆ? ಒಬ್ಬರು ಅದನ್ನು ಬಳಸಿಕೊಳ್ಳಲು ಆಗುತ್ತಿಲ್ಲ, ನೀರು ಬರದೆ, ಬಂದರು ಸ್ವಚ್ಛ ನೀರು ಬರುತ್ತಿಲ್ಲ ಜೊತೆಯಲ್ಲಿ ಅದು ತುಕ್ಕು ಹಿಡಿಯುವ ಸ್ಥಿತಿಯಲ್ಲಿ ಬಂದುನಿಂತಿ–ದೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸರಿಯಾದ ಕ್ರಮ ಕೈಗೊಳ್ಳಬೇಕು. ಇದರಿಂದ ಕ್ಯಾಂಪಸ್ನಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

***ಹರೀಶ್ ಡಿ***

### ಗ್ರಂಥಾಲಯದ ಸಮಸ್ಯೆ:

ಅನೇಕ ವಿದ್ಯಾರ್ಥಿಗಳು ಹಾಸ್ಟಲ್‌ಗಳಲ್ಲಿ ಇದ್ದರೆ ಓದಲು ಹೆಚ್ಚು ಉಪಯೋಗವಾಗುತ್ತದೆಎಂದು ಅನೇಕ ವಿದ್ಯಾರ್ಥಿಗಳು ಮನೆ ಬಿಟ್ಟು ಓದಲು ಹೊರ ಜಿಲ್ಲೆಗಳಿಗೆ ಬಂದುಹಾಸ್ಟಲ್‌ಗಳಲ್ಲಿ ಇರುತ್ತಾರೆ. ಆದರೆ ವಿದ್ಯಾರ್ಥಿಗಳಿಗೆ ತಮ್ಮ ಜ್ಞಾನವನ್ನುಹೆಚ್ಚಿಸಿಕೊಂಡುಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗಿ ಒಂದೊಳೆ ್ಳ ಉದ್ಯೋಗ ಗಿಟ್ಟಿಸಿಕೊಳ್ಳಲು ಪ್ರತಿಯೊಂದುಹಾಸ್ಟಲ್‌ಗಳಿಗೆ ಗ್ರಂಥ-ಾಲಯವು ಅತಿಮುಖ್ಯವಾಗಿರುತ್ತದೆ.ಆದ-ರೆ ಎಲ್ಲ ಹಾಸ್ಟಲ್‌ಗಳಲಿ ್ಲ ಗ್ರಥಾಲಯವು ಹೆಸರಿಗೆ ಮಾತ್ರ ಇರುತ್ತದೆ.ಆದರೆ ವಿದ್ಯಾರ್ಥಿಗಳಿಗೆ ಬೇಕಾಗಿರುವ ಯಾವುದೇ ರೀತಿಯ ಪುಸ್ತಕಗಳು ಅಲ್ಲಿದೊರೆಯುತ್ತಿಲ್ಲ. ಹಾಗೂ ಅತೀ ಮುಖ್ಯವಾಗಿದಿನಪತ್ರಿಕೆಗಳ ಅವಶ್ಯಕತೆ ಹೆಚ್ಚು ಇರುತ್ತದೆ ಯಾವುದೇ ರೀತಿಯಲ್ಲೂ ಕೂಡವಿದ್ಯಾರ್ಥಿಗಳಿಗೆ ಮೂಲ ಸೌಕರ್ಯಗಳುದೊರೆಯುತ್ತಿಲ್ಲ..

### ಬೆಡ್‌ಗಳಸಮಸ್ಯೆ ಬಗೆಹರಿಸಿ

ಗ ಂ ಗೆ ೂ ೀ ತ್ರಿ ಹಾ ಸ್ಟ ಲ್ ನ ಲ್ಲಿ ಎಷ್ಟೋ ವಿದ್ಯಾರ್ಥಿಗಳಿಗೆ ಬ ೆ ಡ್ ಗ ಳ ಇ ಲ್ಲ ದ ೆ ನ ೆ ಲ ದ ಲ್ಲಿ ಮಲಗುವಂತಹ ಪರಿಸ್ಥಿತಿ ಇದೆ. ಮತ್ತು ಒಂದು ಕೊಠಡಿಯಲ್ಲಿ 7 ಮತ್ತು ೮ಜನ ಮಲಗುವಂತಹ ದುರಂತಬಂದಿದೆ.ಇದಕ್ಕೆಲ್ಲ ಅಧಿಕಾ–ರಿಗಳ ನಿರ್ಲಕ್ಷವೇ ಆಗಿದೆ. ಕೂಡಲೇ ಹಾಸ್ಟೆಲ್‌ಗಳ ಸಮಸ್ಯೆಗಳಕಡೆಗೆ ಗಮನಹರಿಸಿ ಪರಿಹ–ರಿಸಬೇಕಿದೆಹಾಗೂ ಹಾಸ್ಟೆಲ್‌ಗಳ ನಿರ್ವಹಣೆಯನ್ನುಸರ್ಮಪಕವಾಗಿ ನಿ ವ ್ ೯ ಹಿ ಸ ೆ ಬ ೀ ೕ ಕಿ ದ ೆ

**ಭರತ್**


**ಸಂಪಾದಕರು**

ಪ್ರೊ.ನಿರಂಜನ

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ

**ಅಧ್ಯಾಪಕ ಸಲಹೆಗಾರರು**

ಡಾ.ಗೌತಮ್ ದೇವನೂರು.ಪಿ

ಅತಿಥಿ ಉಪನ್ಯಾಸಕರು

**ವಿದ್ಯಾರ್ಥಿ ಸಂಪಾದಕರು**

ಭರತ್ ಎಂ ಎಸ್

ಹರೀಶ್ ಡಿ

ದಿವಾಕರ್ ಬಿ,ಆರ್

**ಪುಟ ವಿನ್ಯಾಸ**

ಭರತ್ ಎಂ ಎಸ್

# ಮಾರ್ದನಿ



ಅದೊಂದು ಸ್ಮಶಾನ. ಊರ ಕೊನೆಯಲ್ಲಿದೆ. ಊರಿಂದ ಸ್ಮಶಾನಕ್ಕೆ ಸಾಗುವ ದಾರಿ ಭೀಕರ ಮೌನ. ಹತ್ತಿರ ಬಂದಂತೆ ಭಯಾನಕ ಶಬ್ದ, ಕೂಗು. ಆಗಾಗ ಸುತ್ತುವ ಗಿಡುಗ ರಣ ಹದ್ದುಗಳ ಸಾಮ್ರಾಜ್ಯ. ಗೂಬೆಗಳ ವಿಚಿತ್ರ ಕೂಗು. ಸ್ಮಶಾನ ಕಳೆ ಹೆಚ್ಚಿದೆ. ಓ ಅತ್ತ ಕಡೆ ಯಿಂದ ಯಾರೋ ಬರುತ್ತಿದ್ದಾರೆ. ಇವತ್ತು ಒಳ್ಳೆಯ ಊಟ. ಮಾಂಸ ಸವಿಯಬಹುದು ಗಿಡುಗಗಳು ಗುಂಪಲ್ಲಿ ಮಾತನಾಡ ತೊಡಗಿದವು. ಹೌದು ಇವತ್ತು ನಾವು ಹಬ್ಬದ ರುಚಿ ಸವಿಯಬಹುದು ರಣ ಹದ್ದು, ನರಿ, ನಾಯಿ ಬರುವ ಒಳಗೆ ಮುಗಿಸಬೇಕು. ಸುಮ್ಮನಿರಿ ಅವರು ತೀರಾ ಹತ್ತಿರ ಬರುತ್ತಿದ್ದಾರೆ. ಗುಂಪಿನ ರಾಣಿ ಗಿಡುಗ ಎಚ್ಚರಿಸಿತು. ಅದರ ಅಕ್ಕ ತಂಗಿ ಮಕ್ಕಳು ಮೊಮ್ಮಕ್ಕಳು ಎಲ್ಲ ಗಫ್ ಚುಫ್ ಆಗಿ ನೋಡುತ್ತ ಕುಳಿತವು. ಅಲ್ಲೇ ಮರದ ಕೆಳಗೆ ಕುಳಿತ ನರಿ ಮತ್ತು ಅದರ ಬಳಗ ವೂ ಹೀಗೆ ಯೋಚಿಸಿದವು. ಗಿಡುಗ ನಾಯಿ ಗಿಂತ ಮುಂಚೆ ತಿನ್ನಲು ಕಾಯುತ್ತ ಕುಳಿತವು. ಹಾಗೇ ನಾಯಿ ರಣ ಹದ್ದುಗಳ ತಂಡವು ಕಾಯುತ್ತ ಕುಳಿತವು. ಇದೇನು ಅಮ್ಮ 5 ಜನ ಮಾತ್ರ ಬಂದಿದ್ದಾರೆ. ಈತ ದೊಡ್ಡ ಪಾಪಿ ಇರಬೇಕು. ಮರಿ ಗಿಡುಗದ ಮಾತಿಗೆ ಸುಮ್ಮನಿರುವಂತೆ ತಾಯಿ ಎಚ್ಚರಿಸಿತು.

ಎಲ್ಲವೂ ಮೌನ ವಾಗಿ ಮರೆಯಲ್ಲಿ ಕುಳಿತು ನೋಡುತ್ತಿದ್ದವು. ಸಣಕಲು ದೇಹದ ವ್ಯಕ್ತಿ ಶವ ವಾಗಿ ಬಿದ್ದಿದ್ದಾನೆ. ಬಂದವರು ಶವ ಬಿಟ್ಟು ಹೊರಟರು. ಅದು ಆ ಊರಿನ ಪದ್ಧತಿ. ಒಬ್ಬಾಕೆ ಮಾತ್ರ ತಾನು ಬರುವುದಿಲ್ಲ ಎನ್ನುತ್ತ ಕೂಗುತಿ-ದ್ದಳು. ಅಯ್ಯೋ ಬಿಟ್ ಹೋದ್ಯಲ್ಲೊ. ಆ ಮಕ್ಕಳು ಹಿಡ್ಕೊಂಡು ನಾನು ಎನ್ ಮಾಡ್ಲಿ. ಎನ್ನುತ್ತ ಹೋದವಗೇ ಶಾಪ ಹಾಕುತಿದ್ದಳು. ಅವರು ಅವಳನ್ನು ಎಳೆದು ಕರೆದು ಕೊಂಡು ಹೋದರು. ಅದನ್ನೇ ಕಾಯುತ್ತಿದ್ದ ಗಿಡುಗದ ಗುಂಪು ಹಾರಿ ಬಂತು. ರಾಣಿ ಗಿಡುಗ ಶವವನ್ನು ನೋಡಿ ಯಾರು ಮುಟ್ಟ ಬೇಡಿ ಎಂಬ ಆದೇಶ ನೀಡಿತು. ಆಸೆಯಿಂದ ಇನ್ನೇನು ಶವಕ್ಕೆ ಮುತ್ತ ಬೇಕು ಎಂಬಂತೆ ನೆರೆದ ಗಿಡುಗಗಳ ಗುಂಪು ನಿರಾಸೆ ಇಂದ ಮರಳಿತು. ನಂತರ ಬಂದ ನರಿ ಗುಂಪು ಸಹ ಹಾಗೇ ಹಿಂದಿರುಗಿತು. ನಂತರ ನಾಯಿ ರಣಹದ್ದು ಯಾವುದು ಸಹ ಮುಟ್ಟಲಿಲ್ಲ. ನಿರಾಸೆಯಿಂದ ಮರಳಿದ ಗಿಡುಗದ ಮರಿಗಳು ಯಾಕೆ ಅಮ್ಮ ತಿನ್ನಲು ಬಿಡಲಿಲ್ಲ. ಅದು ಪುಟ್ಟ ನಾವೂ ಯಾವತ್ತು ಎಂಜಲು ತಿನ್ನುವುದಿಲ್ಲ. ಅಂದರೆ ಆಗಲೇ ಯಾರೋ ತಿಂದು ಹೋಗಿದ್ದರ ಅಮ್ಮ. ಹೌದು ಮಗು. ನಮಗಿಂತ ಮೊದಲೇ ಯಾರೋ ಕುರುಕಿ ಕುರುಕಿ ತಿಂದು ಎಸೆದಿದ್ದಾರೆ. ಅದು ಯಾರು ಅಮ್ಮ. ನಮಗಿಂತ ಮೃಗತ್ವ ಇರುವವರು. ಅದು ಆ ಮನುಷ್ಯ ಜಾತಿಯವರೇ ಮಗು. ನಮ್ಮ ರೂಪ ಅವರ ಪ್ರತೀಕ ಅಷ್ಟೇ. ಅವರು ನಮಗಿಂತ ಭೀಕರ ಇರುವರು. ನಮ್ಮ ಈ ಭಯಾನಕ ರೂಪ ಅವರ ಮನೆ ಒಂದು ಅಚ್ಚು. ಅವರ ಕುಲವನ್ನು ಅವರೇ ತಿನ್ನುವರೇ ಅಮ್ಮ. ಹಾಗಾದರೆ ನಾವೇ ಉತ್ತಮ. ಹೌದು ಮಕ್ಕಳ ನಾವು ಸತ್ತ ದೇಹ ಮಾತ್ರ ಕುಕ್ಕಿ ಕುಕ್ಕಿ ತಿನ್ನುತ್ತೇವೆ. ಆದರೆ ಅವರು ಬದುಕಿರುವಾಗಲೇ ಕುಕ್ಕಿ ಕುಕ್ಕಿ ತಿಂದು ಅಗಿದು ಸಾಯಿಸಿ ಈ ರೀತಿ ಉಗುಳುತ್ತಾರೆ. ಅಮ್ಮ ಇವನನ್ನು ಯಾಕೆ ಕುಕ್ಕಿ ತಿಂದು ಸಾಯಿಸಿದ್ದಾರೆ. ಮಗು ಈತ ಒಬ್ಬ ರೈತ. ಇವನನ್ನು ಸಿಕ್ಕ ಸಿಕ್ಕವರೆಲ್ಲ ಕುಕ್ಕಿ ಕುಕ್ಕಿ ತಿನ್ನುತ್ತಾರೆ. ಮಳೆ ನಂಬಿದ ಇವಗೇ ಒಮ್ಮೆ ಮಳೆ ಕುಕ್ಕಿ ತಿನ್ನುತ್ತದೆ. ಮಳೆ ಆಗಿ ಬೆಳೆ ಬಂದರೆ ಕ್ರಿಮಿ ಕೀಟ ಹಕ್ಕಿಗಳು ಕುಕ್ಕಿ ತಿನ್ನುತ್ತವೆ. ಸಿಕ್ಕಷ್ಟು ಮಾರಲು ಹೋದರೆ ದಲ್ಲಾಳಿಗಳು ಕುಕ್ಕಿ ತಿನ್ನುತ್ತಾರೆ. ಅವರಿಗೆ ಇದ್ದಷ್ಟೂ ಕೊಟ್ಟರೆ ಬೆಲೆ ಕುಕ್ಕಿ ತಿನ್ನುತ್ತಾರೆ. ಸಿಕ್ಕಷ್ಟು ತೆಗೆದುಕೊಂಡು ಬಂದರೆ ಸಾಲಗಾರ ಕುಕ್ಕಿ ತಿಂದು ಬಿಡುತ್ತಾನೆ. ಪುನಃ ಸಾಲ ಮಾಡಿ ತಂದರೆ ಹೆಂಡತಿ ಮಕ್ಕಳು ಬಂಧು ಮಿತ್ರ ಹೀಗೆ ಎಲ್ಲರು ಕುಕ್ಕಿ ಕುಕ್ಕಿ ತಿನ್ನುತ್ತಾರೆ. ಸಾಲ ತೀ-ರಿಸಲು ಆಗದೇ ಮನೆ ಸಂಸಾರ ಬೀದಿಗೆ ಬಂದಾಗ ಕಂಗೆಟ್ಟ ಸ್ಥಿತಿಯಲ್ಲಿ ಸಮಾಜ ಕುಕ್ಕಿ ತಿನ್ನುತ್ತದೆ. ಬದುಕಿದ್ದಾಗಲೆ ಕುಕ್ಕಿ ತಿಂದು ತಿಂದು ಒಮ್ಮೆ ಸಾಯಿಸೇ ಬಿಡುತ್ತಾರೆ. ಕೊನೆಗೆ ಇಲ್ಲಿ ಬಿಟ್ಟು ಹೋಗುವಾಗ ಬಿಟ್ಟು ಹೋದೆಯಲ್ಲ ಎಂದು ಶಾಪ ಹಾಕುತ್ತಾರೆ. ಇವರು ಕುಕ್ಕಿ ತಿನ್ನಲು ಇನ್ನು ಅವ ಇರಬೇಕಿತ್ತು ಎಂಬಂತೆ ಅವಗೆ ಬಯ್ಯುತ್ತಾರೆ. ಸತ್ತ ದೇಹ ಕುಕ್ಕುವ ನಮ್ಮನ್ನೇ ಪಾಪಿ ಯಂತೆ ಹೇಸಿಗೆಯಂತೆ ಭಯಾನಕ ಎಂಬಂತೆ ಕಾಣುವ ಇವರು ಅದೆಷ್ಟು ಭಯಾನಕ, ಕ್ರೂರ. ನಮ್ಮದು ಹೊಟ್ಟೆ ಪಾಡಿಗಾಗಿ ಈ ಭಯಾನಕ ಮುಖ. ಅವರದ್ದು ದುರಾಸೆಗಾಗಿ ಸುಂದರ ಮುಖವಾಡ. ರಾಣಿ ಗಿಡುಗ ದೀರ್ಘ ಉಸಿರು ದಬ್ಬೀ ಕತೆ ಮುಗಿಸಿತು. ನಾವೂ ಮನುಷ್ಯರಾಗಿ ಹುಟ್ಟುವುದು ಮಾತ್ರ ಬೇಡ ಭಗವಂತ.. ಆ ಸ್ವಾರ್ಥ ಎಂದೂ ಕೊಡಬೇಡ. ನಮ್ಮ ಕುಲಕ್ಕೆ ಕೇಡು ಬಗೆವ ಯೋಚನೆ ಕೂಡ ಹೇಸಿಗೆ. ನರಿ ಕೂಡ ಮಕ್ಕಳಿಗೆ ಇದೇ ಕತೆ ಹೇಳಿ ನಾವು ಹೊಟ್ಟೆ ಪಾಡಿಗೆ ಕಿತ್ತು ತಿಂದರೆ ಅವರು ಸ್ವಾರ್ಥದ ಅಮಲಿಗೆ ಕಿತ್ತು ತಿನ್ನುತ್ತಾರೆ ಎಂದಾಗ ಅವರ ಪ್ರಾರ್ಥನೆ ಕೂಡ ಮನುಷ್ಯ ಜನ್ಮ ನಮಗೆ ಎಂದಿಗೂ ಬೇಡಾ ಎಂಬುದೇ ಆಗಿ-ತ್ತು. ಹಾಗೇ ನಾಯಿ, ರಣಹದ್ದು ಬೇಡಿದವು. ಕೊನೆಗೆ ಗೂಬೆಯು ಸಹ ನಮ್ಮದು ನೋಡಲು ಭಯಾನಕ ರೂಪ ಮತ್ತು ದನಿ. ಆದರೆ ಇದರ ಮೂಲ ಸತ್ಯ ಹೇಳುತ್ತೇನೆ ಕೇಳಿ ಮಕ್ಕಳ ಇದು ಮನಷ್ಯನ ಮನಸ್ಸಿನ ದುರಾಸೆ ದೂರಾಲೋಚನೆಯ ಪ್ರತಿ-ರೂಪ. ಈ ಭಯಾನಕ ಧ್ವನಿ ಅವನ ಮನಸ್ಸಿನ ಸ್ವಾರ್ಥ-ದ ಅಮಲಿನ ಕರ್ಕಶ ಕೂಗಿನ ಮಾರ್ದನಿ. ಹಿಂದೊಮ್ಮೆ ದೇವರೆ ನಮ್ಮ ಮೂಲದವರಿಗೆ ಈ ಸತ್ಯ ಹೇಳಿದ್ದನಂತೆ ಮನುಷ್ಯ ಎಂದು ಆ ದುರಾಸೆ ಸ್ವಾರ್ಥ ಬಿಡುತ್ತಾನೆಯೋ ಅಂದೆ ಇದ-ರಿಂದ ಮುಕ್ತಿ ಅಂದಿದ್ದನಂತೆ. ಆದರೆ ಇಷ್ಟು ವರ್ಷ ಕಳೆದರೂ ಅದು ಸಾಧ್ಯ ಆಗಿಲ್ಲ. ಹಾಗೇ ಎಂದೆಂದಿಗೂ ಆಗೋದು ಇಲ್ಲಾ. ಎಲ್ಲವು ಅಲ್ಲಿಂದ ಹೊರಟು ಬೇರೆ ಅಹಾರ ಹುಡುಕುತ್ತ ಹೋದವು.

# ಕನಸು ನನಸಾಗುವವರೆಗೂ ಬಿಡದಿರಿ ಛಲ

ಈ ಜಗತ್ತೇ ಒಂದು ವಿಸ್ಮಯ ಹುಟ್ಟಿದ ಪ್ರತಿಯೊಂದು ಜೀವಿಯೂ ಕೂಡ ಈ ಭೂಮಿಯಲ್ಲಿ ಒಂದಲ್ಲ ಒಂದು ದಿನ ಈ ಭೂತಾಯಿ ಮಡಿಲಲ್ಲಿ ಸೇರಲೇಬೇಕು. ಇದಂತೂ ಸತ್ಯ ಅಲ್ವಾ, ಹಾಗಂತ ಕೈಕಟ್ಟಿ ಕುರೋಕೆ ಆಗೋದು ಇಲ್ಲ ಹಾಗಾದ್ರೆ ಮದುವೆ ಮಾಡ್ಕೊಂಡು ಎರಡೆರಡು ಮಕ್ಕಳನ್ನ ಮಾಡ್ಕೊಂಡು ವಯಸ್ಸಾದ ಮೇಲೆ ಒಂದು ದಿನ ಈ ಭೂಮಿಯಲ್ಲಿ ಮಣ್ಣಾದರೆ ಬದುಕಿಗೆ ಏನ್ ಅರ್ಥ ಬಂತು? ಇಷ್ಟೇನಾ ಬದುಕು?? ಇಲ್ಲಾ.. ಅಲ್ವಾ.. ಏನೋ ಮಹತ್ವವಾದ ಕಾರಣ ಇದೆ. ಆ ಬದುಕಿಗಾಗಿ ನಮ್ಮ ಹೆಜ್ಜೆ ಬೆಳಕಿನೆಡೆಗೆ ಸಾಗಬೇಕು. ಬದುಕು ಸುಂದರವಾದ ಸೊಗಸಾದ ಜೀವ ಮತ್ತು ಜೀವನವನ್ನ ಕೊಟ್ಟಿದೆ. ಹೆತ್ತ ತಾಯಿ ಮಡಿಲಿನಿಂದ ಜೀವನ ಎಂಬ ಪ್ರಕಾಶಮಾನ ಬೆಳಕನ್ನ ದಾಟಿ ಅದೊಂದು ದಿನ ಭೂ ತಾಯಿ ಮಡಿಲು ಸೇರುವ ದಿನ ಬಂದೆ ಬರುತ್ತದೆ. ಹಾಗಂತ ನಮ್ಮ ಜೀವನದ ವಯಸನ್ನ ಲೆಕ್ಕ ಹಾಕುತ್ತಾ ಕೂರೋಕೆ ಸಾಧ್ಯನಾ!? ಆಗಲ್ಲ.. ಅಲ್ವಾ.. ನಾವು ಹುಟ್ಟಿರೋದೆ ಒಂದು ಮಹತ್ವವಾದ ಕಾರಣಕ್ಕಾಗಿ ಅಂದ ಮೇಲೆ ಆ ಗೆಲುವಿಗಾಗಿ ಈ ಕನಸಿಗಾಗಿ ನಾವು ಮುಂದೆ ಸಾಗಬೇಕು ಅಲ್ವಾ, ಈ ಹುಟ್ಟು ಸಾವಿನ ಮಧ್ಯ ನನ್ನದೇ ಅದ ಅದ್ಭುತ ಲೋಕ ಇದೆ ಆ ಅದ್ಭುತ ಲೋಕದಲ್ಲಿ ನಾನೇ ರಾಜ ಅಥವಾ ನಾನೇ ರಾಣಿ ನನ್ನದೇ ಒಂದು ದೊಡ್ಡ ಕನಸಿದೆ. ಆ ಕನಸು ನನಸು ಮಾಡ್ಬೇಕು ಅಂದ್ರೆ ಕೆಲವೊಂದು ತೊಂದರೆಗಳು ಬರುವುದು ಸಹಜ ಅಲ್ವಾ. ಆ ತೊಂದರೆಗೆ ಭಯ ಪಡುತ್ತಾ ಕೂತರೆ ಏನೂ ಆಗಲ್ಲ ಅಲ್ವಾ. ಒಂದು ಸಲ ಯೋಚಿಸಿ ಹುಟ್ಟಿನಿಂದ ಸಾಯುವ ತನಕ ನಮ್ಮ ಜೀವನದಲ್ಲಿ ಹಲವಾರು ವಿಷಯಗಳು ಬಂದು ಹೋಗುತ್ತದೆ ಅದು ಕಷ್ಟನೋ, ಸುಖಾನೋ ಜನರು ಲೆಕ್ಕಿಸದೆ ತಮ್ಮ ಜೀವನವನ್ನ ರೂಪಿಸಿಕೊಳ್ಳುವುದಕ್ಕಾಗಿ ಜೀವನ ನಡೆಸಿಕೊಂಡು ಹೋಗುವರನ್ನ ತುಂಬಾ ನೋಡಿದ್ದೇವೆ. ಹಾಗಂತ ಯಾರಾದರೂ ಸುಮ್ಮನೆ ಕೂತು ಕಾಲ ಕಳೆದು ಒಂದು ದಿನ ಸಾಯುವುದನ್ನ ನೋಡಿದ್ದಿರಾ..? ಇಲ್ಲ..ಅಲ್ವಾ ತಮ್ಮ ಹೊಟ್ಟೆಪಾಡಿಗೊಸ್ಕರ ಏನಾದ್ರೂ ಕೆಲ್ಸ ಮಾಡಿ ಅಥವಾ ಬಿಕ್ಷೆ ಬೇಡಿಯಾದರು ಹೊಟ್ಟೆ ತುಂಬಿಸಿಕೊಳ್ಳುವರನ್ನ ಹಲವಾರು ಜನರನ್ನ ನೋಡಿದ್ದೇವೆ. ಹಾಗಾದ್ರೆ ಅವ-ರಿಗೆ ಯಾಕೆ ಭಯ ಇಲ್ಲ ಅವರದ್ದು ಒಂದು ಜೀವನ ಇದೆ ಅಲ್ವಾ. ಅವರು ತಮ್ಮ ಜೀವನವನ್ನ ಮುಂದುವರೆಸಬೇಕು ಅಂತ ಏನೋ ಬಿಕ್ಷೆ ಬೇಡಿ ಅಥವಾ ಕೂಲಿ ಹೋಗಿ ದುಡಿದು ತಿನ್ನೋರನ್ನ ನೋಡಿದ್ರೂ ನಮಗೆ ಯಾಕೆ ಅವರ ತರ ಭಯ ಇಲ್ದೇನೆ ನಾವು ಕೆಲ್ಸ ಮಾಡಿ ನಮ್ಮ ಜೀವನ ಕೂಡ ಒಂದು ಒಳ್ಳೆ ಸುಂದರವಾಗಿ ರೂಪಿಸಿಕೊಳ್ಳಬಾರದು. ಸಾಧ್ಯ ಇದೆ ಅಂದ್ಮೇಲೆ ಆ ಜೀವನಕ್ಕೆ ನಾನು ರಾಜ ಅಥವಾ ರಾಣಿ ಯಾಕೆ ಆಗಬಾರದು. ನನ್ನಲ್ಲೂ ಆ ಧರ್ಯ ಆ ಶಕ್ತಿ ನನ್ನ ಮೇಲೆ ನನಗಿರುವ ನಂಬಿಕೆ ಇವೆಲ್ಲವೂ ಇದ್ದರೆ ನನ್ನ ಕನಸಿಗೆ ರಾಜ, ರಾಣಿ ಆಗೋಕೆ ಸಾಧ್ಯ. ನನ್ನ ಜೀವನದ ಕನಸನ್ನ ನನಸು ಮಾಡಿದ್ರೆ ಆ ಬದುಕು ನೆಮ್ಮದಿಯ ಪಯಣ ಮುಗಿಸಿದರು ಯಾವ ಯೋಚನೆಗಳು ಬರುವುದಿಲ್ಲ. ನಮ್ಮ ಕನಸು ನನಸು ಆಗುವವರೆಗೂ ಈ ಪಯಣ ಸಾಗಬೇಕು ನನ್ನದೇ ಆದ ಹೆಜ್ಜೆಯಲ್ಲಿ ಈ ಪಯಣ ಸಾಗುತಿರಲಿ ಹಗಲಿರುಳು.




## ಗಜಲ್

ನಾನು ಬದುಕೂರಿನ ಬಯಲೊಳಗೆ
ಬೆಳಗಾಣದ ಅಲೆಮಾರಿ ಗುರುಗಳೆ.
ಕತ್ತಲ ಗರ್ಭದಲಿ ಮಿಣುಕು ಬೆಳಕು
ನೀವು ಎನಗೆ ತೋರಿದಿರಿ
ಗುರುಗಳೆ..
ಗುರುಗಳೆ.. ಮನದ ಸೂರಿನ ಮುಂದಣ
ಅಂಗಳು
ಬೆನ್ನ ಹರಿವಿ ಹಸನಾಗಿ ಭಣಗುಡುತ್ತಿದೆ.
ಅಕ್ಷರಗಳ ಚುಕ್ಕೆ ಸೇರಿಸಿ ಶಿಕ್ಷಣವನ್ನೋ
ರಂಗೋಲಿಯನ್ನ ಬಿಡಿಸಿದ್ದಿರಿ
ಗುರುಗಳೆ..
ಅನುದಿನವು ಸೂರ್ಯನು ದುಡಿದು
ದಣಿದು ಕತ್ತಲ ಹುಟ್ಟಿಸಿ ಹೋದರು
ನೀವೆಂದು ನನ್ನ ಪಾಲಿಗೆ ಅಸ್ತಂಗತ
ಆಗದೆ ಸದಾ ಬೆಳಕಾದಿರಿ ಗುರುಗಳೆ..
ತಪ್ಪು-ಒಪ್ಪುಗಳ ಸರಮಾಲೆಯೆ ಇತ್ತು
ಸದಾ ನರಳುತ್ತಾ ನೆನಪಾ ಹಸಿಬೆಯಲ್ಲಿ
ಮನ್ನಿಸಿ-ಅರ್ಥೈಸಿ ಎಂದು ಬಾಡದ
ಹೂ ವ್ಯಕ್ತಿತ್ವ ನನಗೆ ಕರುಣಿಸಿದಿರಿ
ಗುರುಗಳೆ..
ಮತ್ತದೆ ಕತ್ತಲ-ಬೆಳಕಿನ ಚಿನ್ನಾಟ ಆಗಿದೆ
ಮಾಮೂಲಿ ಬದುಕರಿಸುವವರ ಪಾಲಿಗೆ
ಖಾಯಂ ಲಾಂದ್ರವನೂ ಬೆಳಗಿಸಿ ಭವ್ಯ
ಭವಿಷ್ಯವೆನಗೆ ಅರಹುದಿರಿ ಗುರುಗಳೆ..
ಗಮ್ಯ ಕಾಣಬೇಕೆಂಬ ಕಡುಗತ್ತಲ
ಹಸಿವು ಹೊತ್ತು ಅಲೆಯುವ ಅಲೆಮಾರಿ
ಈ ಗಂಗಾ... ಹೆಜ್ಜೆಗುಂಟ ನೀವಿಟ್ಟ
ಜ್ಞಾನದ ದೀಪಗಳು
ನಿಖರ ಗುರಿ-ದಾರಿ ತೋರಿದಿರಿ
ಗುರುಗಳೆ.

.

ಗಂಗಾಧರ್ ನಾಗರಾಜ್

# ಅರಿವಿನ ಬೆಳಕೇ ಬುದ್ಧಚರಣ

## ಪುಸ್ತಕ ವಿಮರ್ಶೆ



ಹೀಗಿನ ಬಹುತೇಕ ಕವಿಗಳು ಕಲ್ಪನಾ ಲೋಕದ ವಿಹಾರಿಗಳೆ ಆದರೆ ಅಲ್ಲಿ ಅರಳೋ ಹೂವು, ಬಳ್ಳಿ, ಮುತ್ತು, ರತ್ನ, ಸರ್ಗ ಇತ್ಯಾದಿಗಳು ಕಲ್ಪನೆಯಷ್ಟೆ ಸುಳ್ಳು. ಅದು ನನಗೆ ಅಷ್ಟಾಗಿ ಓದಲು ಆಸಕ್ತಿಯೂ ಇಲ್ಲ ಆದರೆ ಎಚ್.ಎಸ್ ವೇಕಟೇಶಮೂರ್ತಿ ಸರ್ ಅಂತವರು ವಾಸ್ತವದಲ್ಲಿನ ಪ್ರತಿಯೊಂದು ಮನಗಳಲ್ಲೂ ನೆಮ್ಮದಿಯ ನೇಲಸಬೇಕಾದರೆ ಅಲ್ಲಿ ಬುದ್ದಿನಿರಬೇಕು ಇಲ್ಲ ಅವನ ತತ್ವಗಳಿರಬೇಕು ಎನ್ನುತ್ತ ಯಥಾವತ್ತಾಗಿ ಬರವಣಿಗೆಗಿಳಿಸಿ ಕಾವ್ಯರೂಪ ಕೊಡ್ತಾರೆ. ಹಾಗಾಗಿ ನನಗೆ ಅತಿ ಇಷ್ಟವಾದದ್ದು ಅವರ ಬರಹದ ಶೈಲಿ. ವಾಸ್ತವ ಪರಿಸ್ಥಿತಿಯ ಅವಲೋಕನ ಮತ್ತು ಅನಾವರಣ ಮಾಡುತ್ತ ಸಮಾಜ-ಕ್ಕೆ ನೀತಿಸಾರ ಹೇಳುವ ಗುಣ. ಪ್ರಾಯಶಃ ನಾನು ಇಲ್ಲಿಯವರೆಗೆ ಓದಿರುವ ಯಾವೊಂದು ಪುಸ್ತಕ ಸಹ ನನ್ನನ್ನು ಅಷ್ಟು ಕಾಡಿಲ್ಲ ಕಾರಣ ಅದರಲ್ಲಿರುವ ವಿಷಯ ವಸ್ತುವಿರಬಹುದು ಅಥವಾ ಬರಹದ ಶೈಲಿಯ ಪರಿಪಕ್ವತೆಯ ಕೊರತೆ ಇರಬಹುದು.ಆದರೆ 'ಬುದ್ದಚರಣ' ದ ಪ್ರತಿ ಸಾಲು ಸಹ ದಿನಾಲು ನನ್ನ ಮನದಲ್ಲಿ ಒಮ್ಮೆಯಾದರು ನೆನೆಯದೆ ಇರುತಿ-ರಲಿಲ್ಲಾ. ಇದೊಂದು ನಮ್ಮನ್ನ ನಾವೂ ಕಂಡು ಕೊಳ್ಳುವ ಪರಿಯ ಜೊತೆಗೆ ಬದುಕಿಗೆ ಅರ್ಥಕಂಡುಕೊಳ್ಳುವ ಧನ್ಯತಸ್ಥಿತಿ ಹೆಸರಲ್ಲೇ ಚರಿತ್ರೆ ಸೃಷ್ಟಿಮಾಡುವ ಎಲ್ಲ ಅಂಶಗಳ ಜ್ಞಾನದ ಮೌನ ಕಣಜ ಬುದ್ದಚರಿತ. ಆ ಹೆಸ-ರಿಟ್ಟುಕೊಂಡು ಸಮಾಜದ ಜನರಲ್ಲಿ ಜ್ಞಾನದ ಪ್ರಖರತೆ ಮೂಡಿಸಲೊರಟ ಸತ್ಯಶೋಧಕ ಮತ್ತು ಸತ್ಯ ಪ್ರತಿಪಾದಕ ಕಾವ್ಯ ಬುದ್ದಚರಿತ. ಅನಾರೋಗ್ಯ, ಮುದಿತನ, ಸಾವುಗಳನ್ನ ಕಂಡ ರಾಜಕುಮಾರ ದುಃಖ-ದ ಮೂಲವನ್ನ ಶೋಧಿಸುತ್ತ ಹೊರಟು ಅರಿವೆಂಬ ಜ್ಞಾನದ ಬೆಳಕ ಪಡೆದು ಬುದ್ಧನಾದ. ಇಂದಿನ ವಾಸ್ತವದಲ್ಲಿ ಸಾವು ನೋವಿನ ಬೆಳಗು ಇರುಳುಗಳನ್ನು ಕಳೆಯುತ್ತಿರುವ ನಾವು ಏನನ್ನು ಹುಡುಕುವುದು? ಏನನ್ನು ಪಡೆಯುವುದು? ಎಂಬುದರ ಶೋಧನೆಯಲ್ಲೆ ಅರ್ಧ ವಯಸ್ಸು ಕಳೆಯುತ್ತಿದ್ದೇವೆ. ಇತಿಹಾಸದ ಪುಟಗಳ ತಿರುಗಿಸುತ್ತಾ ಬದುಕಿನ ನಶ್ವರತೆಯನ್ನು ಬಗೆಬಗೆಯಾಗಿ ನಾವು ಕಂಡಿದ್ದರೂ, ಬದುಕೆಂಬ ಈ ಕಾಲಘಟ್ಟದಲ್ಲಿ ಇದ್ದಕ್ಕಿದಂತೆ ಏನೆಲ್ಲ ಸಂಭವಿಸಿ ಈಗ ಇದ್ದವರು ನಾಳೆ ಇಲ್ಲ!? ಎನ್ನುವ ಮಟ್ಟಕ್ಕೆ ರೋಗ ರುಜುನಿಗಳು. ಆಸೆ ಆಮಿಷಕ್ಕಾಗಿ ನಡೆಯುವ ಕೊಲೆ ಸುಲಿಗೆಗಳು ಜನರ ಬದುಕನ್ನ ಅಂಧಕಾರದಲ್ಲಿಟ್ಟಿವೆ. ಇಂದಿನ ಕೊರೋನಾದಂತಹ ಕಾಲಘಟ್ಟದಲ್ಲಿ ಸಮಾಜದಲ್ಲಿನ ಬದಲಾವಣೆ ಗಮನಿಸಿದರೆ ಸಾಕು ಹೀಗಿನ ಜೀವನ ಶೈಲಿ ಅನುಭವಕ್ಕೆ ತಾನಗೇ ಸಿಗುತ್ತದೆ. ಜೀವನದ ಸಂಗತಿಗಳನ್ನು ಅರಿತು ಬದುಕ ಕಟ್ಟಿಕೊಳ್ಳಲು ಸೆಣಸಾಡುವ ಜನ ಜೀವನವನ್ನು ಕವಿ ಎಚ್. ಎಸ್. ವೆಂಕಟೇಶಮೂರ್ತಿ ಯವರ ಬುದ್ಧಚರಣ ಎಂಬ ಕಾವ್ಯ ತಿಳಿಸುತ್ತದೆ. ನಮ್ಮೆಲ್ಲ ಪ್ರಶ್ನೆಗಳಿಗೆ ಉತ್ತರವೆ ಬುದ್ದನ ತತ್ವದರ್ಶನಗಳು ಎನ್ನುವುದು ಲೇಖಕರ ಮಾತು. ಕರುನಾಡಿನ ಜನತೆಗೆ ಬುದ್ದನೆಂಬ ಹೆಸರು ಹೊಸದೆನಲ್ಲ. ಸಿದ್ಧಾರ್ಥ ಬುದ್ಧನಾಗುವ ಕುರಿತಾಗಿ 'ಮಹಾರಾತ್ರಿ'ಯನ್ನು ಬರೆದವರು ಕುವೆಂಪು, 'ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ' ಎನ್ನುವ ಪ್ರೇರಣೆಯ ನುಡಿಗಳ ಮೂಲಕ ಜಗದ ಜನಮನದಲ್ಲಿ ಕಾವ್ಯದ ಕಿಚ್ಚು ಹಚ್ಚಿದ ಬೇಂದ್ರೆಯವರು. ಮೋಹವೆಂಬ ಮದದಲ್ಲಿ ಬೋಗಜೀವನದ ಅರಮನೆಯ ವಿಲಾಸಿ ಜೀವನದ ಆಸೆಗಳ ತೋರೆದು ಪ್ರೀತಿಯ ದಾರ್ಶನಿಕನಾದ ಬುದ್ದನೆಂದು ವಿಶ್ಲೇಷಿಸಿದ ಲಂಕೇಶ್, ಅಂಗುಲಿಮಾಲನ ಹೃದಯದ ರಕ್ಷಸತನವನ್ನು ಕರಗಿಸಿ ಪ್ರೇಮದ ಹಣತೆ ಬೆಳಗಿದ ಬುದ್ದನ ಬೆರಗನ್ನು ಕನ್ನಡದ ಓದುಗರಿಗೆ ಆಪ್ತವಾಗಿಸಿದ. ಗೋವಿಂದ ಪೈ, ಜಿ.ಪಿ. ರಾಜರತ್ನಂ, ಶಿವರಾಮ ಕಾರಂತ ಸೇರಿದಂತೆ ಕನ್ನಡದ ಬರಹಗಾರರನ್ನು ತನ್ನತ್ತ ಸೆಳೆದು ಹೊಸ ಅನ್ವೇಷಣೆಗೆ ಒಡ್ಡಿಕೊಳ್ಳುವ ಮಹಾನ್ ಚೇತನ ಬುದ್ದ. ಬುದ್ದನ ಬದುಕನ್ನು ಕಾವ್ಯದ ಮೂಲಕ ನಾಡಿನ ಜನತೆಗೆ ಪರಿಚಯಿಸಿರುವ ಲೇಖಕರಾದ ಎಚ್. ಎಸ್ ವೇಕಟೇಶಮೂರ್ತಿ ಅವರ ಕನಸುಗಳ ಭಾವಗಳ ತೋಳಲಾಟಗಳ ಅನ್ವೇಷಣೆಯೇ ಈ ಕೃತಿಯ ಅರ್ಪಣೆ ಎನಿಸುತ್ತದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಬುದ್ದನೆಂಬ ಜ್ಞಾನ ಕಿರಣ ಬದುಕಿನ ಸಾರ್ಥಕತೆ ದೃಷ್ಟಿಯಿಂದ ಬಹು ಪ್ರಿಯವಾದದ್ದು. ಬುದ್ಧನ ಅಗತ್ಯವನ್ನು ಈ ತಲೆಮಾರಿಗೆ ಮನಗಾಣಿಸುವ ದೃಷ್ಟಿಯಿಂದಲೂ, ಅಜ್ಞಾನ ಅಂ-ಧಕಾರದಿಂದ ಕುರುಡಾಗಿರುವ ಸಮಾಜದ ಜನರಲ್ಲಿ ಜ್ಞಾನದ ಅರಿವು ವೃದ್ಧಿಸುವ ಶಕ್ತಿ ಬುದ್ದನ ತತ್ವದರ್ಶಗಳಲ್ಲಿದೆ ಎನ್ನುವ ಸತ್ಯವನ್ನ ಜಗತ್ತಿನಾದ್ಯಂತ ತಿಳಿಸುವ ನಿಟ್ಟಿನಲ್ಲಿ 'ಬುದ್ಧಚರಣ' ಕೃತಿಯನ್ನ ಲೇಖಕರು ಬಿಡುಗಡೆಗೊಳಿಸಿದ್ದಾರೆ. ಬುದ್ದನನ್ನ ಸಮಕಾಲೀನಗೊಳಿಸುವ ಪ್ರಜ್ಞಾಪೂರ್ವಕ ಹಂಬಲ ಲೇಖಕನದು. ಎಲ್ಲಕ್ಕಿಂತ ಮಿಗಿಲಾಗಿ ಬದುಕಲ್ಲಿ ಶಾಂತಿ ಬಯಸುವ ಪ್ರತಿಯೊಬ್ಬರು ಬುದ್ದನ ಓದಿಕೊಂಡು ಅವನ ನೀತಿಸಾರಗಳ ತತ್ವಗಳ ಮನದಲ್ಲಿ ಅರ್ಪಣೆ ಮಾಡಿಕೊಂಡು ಪಾಲಿಸುತ್ತ ಸಾಗಿದರೆ ಅವನಿಗಿಂತ ಸುಖಿಯಾ-ರಿಲ್ಲ ಎನ್ನುವ ಸಾರ್ವಕಾಲಿಕ ಸತ್ಯವನ್ನ ಈ 'ಬುದ್ದಚರಣ' ಕಾವ್ಯ ತಿಳಿಸುತ್ತದೆ. ಮೌನವಾಗಿರೋ ಮನಸ್ಸುಗಳನ್ನ ಬಡೆದೆಬ್ಬಿಸೋ ತಾಕತ್ತು ಪ್ರತಿಯೊಂದು ಸಾಲು ಪದಗಳಿಗಿದೆ ಸತ್ಯದ ನೆತ್ತರಿಗೆ ಅಕ್ಷರ ರೂಪ ಕೊಟ್ಟಿದ್ದಾರೆ. ಕ್ರಾಂತಿಯ ಹಿಂದೆ ಶಾಂತಿ ಇದೆ ಅನ್ನೋ ಮಾತು ಕಾಲಗರ್ಭದಲ್ಲಿ ಹೂತು ಹೋಗಿದೆ ಅದರ ಉತ್ಖನನ ಮತ್ತೆ ಮತ್ತೆ ಕೈಗೊಳ್ಳಬೇಕಾಗಿದೆ.

# ಬಂಧ ಸಂಬಂಧಗಳನ್ನೆ ಬೆಸೆದ ಕೊರೋನಾಗೆ ತುಂಬಾ ಥ್ಯಾಂಕ್ಸ್



ಕೊರೋನಾದಿಂದ ಎಲ್ಲೆಡೆ ರಜೆ ಘೋಷಿಸಿದ್ದಾರೆ. ಯಾವುದೇ ಕೆಲಸ ಕಾರ್ಯಗಳೇ ಇಲ್ಲ. ಅನಿವಾರ್ಯ ಕೆಲಸಗಳನ್ನು ಹೊರತುಪಡಿಸಿ ದಿನಪೂರ್ತಿ ಪ್ರತಿಯೊಬ್ಬ ವ್ಯಕ್ತಿಯೂ ಮನೆಯಲ್ಲಿಯೇ ಇರುವಂತಾಯಿತು. ಈ ಸಮಯವನ್ನು ಸದುಪಯೋಗ ಪಡಿಸಿಕೊಂಡಿದ್ದಾದರೂ ಹೇಗೆ ಗೊತ್ತಾ!? ಕೊರೋನಾದಿಂದ ಎಲ್ಲೆಡೆ ಮುನ್ನೆಚ್ಚರಿಕೆಯ ಜೀವನ ನಡೆಸಬೇಕಿದೆ. ಕೊರೋನಾ ವಾ-ರಿಯರ್ಸ್ ಡಾಕ್ಟರ್ಸ್‌ಗಳಿಗೆ ರಜೆ ಇಲ್ಲ ಡಾಕ್ಟರ್ಗಳು ಪ್ರತಿನಿತ್ಯ ಬರುವಂತಹ ಕೊರೋನಾ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ. ತುರ್ತುಪರಿಸ್ಥಿತಿಯ ಅಗತ್ಯತೆಗೆ ಹೊರತುಪಡಿಸಿ ಬೇರೆಲ್ಲರಿಗೂ ರಜೆ ಇರುವ ಕಾರಣ ಎಲ್ಲರೂ ಮನೆಯಲ್ಲಿ ಇದ್ದಾರೆ. ಎಲ್ಲರಿಗೂ ಎಲ್ಲದಕ್ಕೂ ರಜೆ ಘೋಷಿಸಿದರು ಸಹ ಪಾಕಶಾಲೆ ರನ್ ಆಗಲೇಬೇಕು ಅಲ್ಲವೆ, ಇಲ್ಲದಿದ್ದರೆ ಹೊಟ್ಟೆ ತುಂಬುವುದಾದರು ಹೇಗೆ. ಮಹಿಳೆಯರು ಮನೆಯಲ್ಲಿ ಇರುವಂತಹ ಸದಸ್ಯರಿಗಾಗಿ ಪ್ರತಿನಿತ್ಯ ಮಾಡುವಂತಹ ಆಹಾರಗಳಿಗಿಂತ ಹೆಚ್ಚಾಗಿ ವಿಭಿನ್ನ ಬಗೆಯ ಭೋಜನಗಳನ್ನು ಮಾಡಲು ಮುಂದಾಗುತ್ತಿದ್ದಾರೆ. ಮನೆಯಲ್ಲಿರುವ ಎಲ್ಲರೂ ಟಿವಿ ಮೊಬೈಲ್ ಹೀಗೆ ಮನರಂಜನಾ ಕಾರ್ಯಕ್ರಮಗಳ ಬಗ್ಗೆ ಯೋಚಿಸುತ್ತಿದ್ದರೆ ಮಹಿಳೆಯರು ಇಂದು ತಿಂಡಿಗೆ ಏನು ರೆಡಿ ಮಾಡುವುದು ಮಧ್ಯಾಹ್ನ!? ರಾತ್ರಿಯ ಊಟಕ್ಕೆ ಸಂಜೆಯ ಸ್ನಾಕ್ಸ್ ಇವೆಲ್ಲವೂ ರೆಡಿ ಮಾಡುವುದರ ಬಗ್ಗೆ ಯೋಚಿಸುತ್ತ ದಿನಪೂರ್ತಿ ಕಳೆಯುತ್ತಿದ್ದಾರೆ. ಅಷ್ಟೇ ಅಲ್ಲದೆ ದೂರವಾದ ಸಂಬಂಧಗಳು ಮತ್ತೇ ಕೂಡಿಕೊಂಡಿವೆ. ಎಲ್ಲರಿಗೂ ನಾವು ನಮ್ಮವರು ಎಂಬ ಭಾವನೆ, ಬಂಧ-ಸಂಬಂಧಗಳನ್ನು ಬೆಸೆದ ಕೊರೋನಾಗೆ ತುಂಬಾ ಥ್ಯಾಂಕ್ಸ್..

ರಾಧ. ಹೆಚ್.ಆರ್ ನಮ್ಮೂರ ಸರ್ಕಾರಿ ಶಾಲೆ ಬಂಧ ಸಂಬಂಧಗಳನ್ನೆ ಬೆಸೆದ ಕೊರೋನಾಗೆ ತುಂಬಾ ಥ್ಯಾಂಕ್ಸ್

# ಓಲವೇ

ಓ ನನ್ನ ಓಲವೇ ಜಿಂಕೆ ಕಣ್ಣಿನ
ಚೆಲುವೆ ಕಂಡಾಗ ನಿನ್ನ ಕರಗಿ-
ತು ನನ್ನ ಮನ ಕಂಡಾಗ ನಿನ್ನ
ಕರಗಿತು ನನ್ನ ಮನ ಅದಕ್ಕೆ
ಜಿಂಕೆ ಕಣ್ಣಿನಂತ ಆ ನಿನ್ನ ಕಣ್ಣೆ
ಕಾರಣ
ಬಾನಂಗಳದ ಚೆಲುವೆ ನೀನು
ನನಗಾಗಿಯೇ ಬಂದಿರುವೇನು.
ಬಾನಂಗಳದ ಚೆಲುವೆ ನೀನು
ನನಗಾಗಿಯೇ ಬಂದಿರುವೇನು.
ಆಗೋದೇ ನಿನ್ನನ್ನು
ನೋಡಿದಾಗಿನಿಂದ ನಾ ನಿನ್ನ
ಪ್ಯಾನು
ರೆಪ್ಪೆಯನ್ನು ಪಟ ಪಟ
ಬಡಿಯುವ ಆ ನಿನ್ನ ಕಣ್ಣು
ರೆಪ್ಪೆಯನ್ನು ಪಟ ಪಟ
ಬಡಿಯುವ ಆ ನಿನ್ನ ಕಣ್ಣು
ನನಗಾಗಿಯೇ ಹುಟ್ಟಿರುವ
ಚೆಲುವಾದ ಹೆಣ್ಣು ನೋಡುತ್ತಾ
ಕೂತು ನಿನ್ನನ್ನೂ ಸಮಯವೆಲ್ಲ
ಹಾಳು
ನೋಡುತ್ತಾ ಕೂತು ನಿನ್ನನ್ನೂ
ಸಮಯವೆಲ್ಲ ಹಾಳು ನೀ ನನ್ನ
ಒಪ್ಪದಿದ್ದರೆ ಹಾಳಾಗುತೆ
ನನ್ನಿ ಬಾಳು ಹುಣ್ಣಿಮೆಯ
ಚಂದ್ರನ ಬೆಳಕಿನಂತೆ ನೀನು
ಹುಣ್ಣಿಮೆಯ ಚಂದ್ರನ
ಬೆಳಕಿನಂತೆ ನೀನು ಎಂದೆಂದಿಗೂ
ನನ್ನೊಂದಿಗೆ ಇರುತ್ತಿಯೇನು ?
ಕಂಡಾಗ ನಿನ್ನ ಕರಗಿತು ನನ್ನ
ಮನ ಕಂಡಾಗ ನಿನ್ನ ಕರಗಿತು
ನನ್ನ ಮನ ಅದಕ್ಕೆ ಆ ನಿನ್ನ ಓರೆ
ನೋಟವೇ ಕಾರಣ
ನೀ ಒಂದು ಅಂದವಾದ
ರುಚಿಯಾದ ಹಣ್ಣು ನೀ ಒಂದು
ಅಂದವಾದ ರುಚಿಯಾದ ಹಣ್ಣು
ಏತಕೆ ಬೇಕು ಯಾರ ಅನುಮತಿ
ತಿನ್ನಲೆ ನಾ ನಿನ್ನನ್ನು?